**ದಿನಾಂಕ:11.08.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಜಿ.ಎಸ್., 1 ನೇ ಪ್ರತಿವಾದಿ ಪರ ವಕೀಲರಿಂದ**

30. ನಾನು ದಿನಾಂಕ.15.11.1997 ರಂದು 1 ರಿಂದ 3 ನೇ ದಾವಾ ಆಸ್ತಿಗಳ ಕುರಿತು 1 ನೇ ವಾದಿ ಮತ್ತು 1 ನೇ ಪ್ರತಿವಾದಿಗೆ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿದ್ದು, ಅಂದಿನಿಂದ ನಾನು ಪ್ರತ್ಯೇಕವಾಗಿ ಇದ್ದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.



ಸದರಿ ಹಕ್ಕು ಬಿಡುಗಡೆ ಪತ್ರವನ್ನು ನಾನು ಸ್ವಇಚ್ಚೆಯಿಂದ ಮಾಡಿಕೊಟ್ಟಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ಸ್ವಇಚ್ಚೆಯಿಂದ ಕುಟುಂಬದಿಂದ ಹೊರಗಡೆ ಬಂದಿದ್ದು, ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

31. 4 ನೇ ದಾವಾ ಆಸ್ತಿಯನ್ನು ಮೃತ 1 ನೇ ಪ್ರತಿವಾದಿ ದಿನಾಂಕ.11.09.2000 ನೇ ಇಸವಿಯಿಂದ ಖರೀದಿಸಿದ್ದು ಅದು ಆತನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಿನಾಂಕ.11.09.2000 ರಂದು ನಾನಾಗಲೀ ಅಥವಾ 2 ಮತ್ತು 3 ನೇ ಪ್ರತಿವಾದಿಯಾಗಲೀ ಒಟ್ಟು ಕುಟುಂಬದಲ್ಲಿ ಇರಲಿಲ್ಲ ಆದ್ದರಿಂದ 4 ನೇ ದಾವಾ ಆಸ್ತಿಯು ಮೃತ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. 4 ನೇ ದಾವಾ ಆಸ್ತಿಯನ್ನು ಖರೀದಿಸಲು 1 ನೇಪ್ರತಿವಾದಿಯ ಹೆಂಡತಿಯ ತಂದೆಯಾದ ಪುಟ್ಟಲಿಂಗಣ್ಣ ಇವರು ಹಣವನ್ನು ಕೊಟ್ಟು 1 ನೇ ಪ್ರತಿವಾದಿ ಹೆಸರಿಗೆ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ.11.09.2000 ರಂದು ನಮ್ಮ ಕುಟುಂಬಕ್ಕೆ ಸಾಕಷ್ಟು ವರಮಾನ ಇತ್ತು ಅಂತ ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. 4 ನೇ ದಾವಾ ಆಸ್ತಿಯನ್ನು ಯಾರು ಯಾವ ರೀತಿ ಖರೀದಿಸಿರುತ್ತಾರೆ ಅಂತ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

32. ಸರ್ವೆ ನಂಬರ್ 38/ಪಿ13, 38/ಪಿ14 ಮತ್ತು 38/ಪಿ15 ಇವುಗಳಲ್ಲಿ ನನ್ನ ತಂದೆ ಕೆ. ರುದ್ರಪ್ಪನವರಿಗೆ ಭಾಗ ಬಂದಿರುತ್ತದೆ ಅಂತ ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ 3 ಆಸ್ತಿಗಳು ನನ್ನ ಮತ್ತು ತಾಯಿಯವರ ಜಂಟೀ ಸ್ವಾಧೀನದಲ್ಲಿ ಇರುತ್ತದೆ ಅಂತ ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆ ಕೆ. ರುದ್ರಪ್ಪನವರು 2000 ನೇ ಇಸವಿಯಲ್ಲಿ 1 ರಿಂದ 3 ನೇ ದಾವಾ ಆಸ್ತಿಗಳ ಆದಾಯದಿಂದ ಬಂದ ಹಣದಿಂದ 4 ನೇ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ.11.09.2000 ನೇ ಇಸವಿಯಲ್ಲಿ ನಮ್ಮ ಕುಟುಂಬಕ್ಕೆ ಯಾವುದೇ

ಆದಾಯ ಇರಲಿಲ್ಲ ಮತ್ತು ಜೀವನ ನಿರ್ವಹಣೆ ಮಾಡಲು ಕಷ್ಟ ಇತ್ತು ಎಂದರೆ ಸರಿಯಲ್ಲ.

33. 4 ನೇ ದಾವಾ ಆಸ್ತಿಯ ದಾಖಲೆಗಳಲ್ಲಿ 1 ನೇ ಪ್ರತಿವಾದಿಯ ಹೆಸರು ನಮೂದು ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ತೀರಿಕೊಂಡ ನಂತರ ಅವರ ಹೆಂಡತಿ ಶಿಲ್ಪ ಇವರ ಹೆಸರಿನಲ್ಲಿ ಪೌತಿ ಖಾತೆ ಆಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಂಡತಿ ಶಿಲ್ಪ ಇವರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಾನು, ನನ್ನ ತಾಯಿ ಮತ್ತು ಪ್ರತಿವಾದಿಯರು ಜಂಟೀ ಸಾಗುವಳಿ ಮಾಡುತ್ತಿದ್ದೇವೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.



34. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 6 ನೇ ಖಂಡಿಕೆ ಮೊದಲನೇ ವಾಕ್ಯದಲ್ಲಿ ಬರೆದಿರುವ ಅಂಶಗಳು ಸರಿ ಇರುತ್ತವೆ. ನಾನು 1 ನೇ ಪ್ರತಿವಾದಿಯೊಂದಿಗೆ ಎಂದಿಗೂ ವಾಸವಾಗಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯೊಂದಿಗೆ ಎಂದಿಗೂ ಭಾಗ ಕೇಳಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಒಟ್ಟು ಕುಟುಂಬದ ಆದಾಯವನ್ನು ಒಟ್ಟು ಕುಟುಂಬಕ್ಕೆ ಉಪಯೋಗಿಸದೇ ದುರುಪಯೋಗ ಮಾಡುತ್ತಿದ್ದನು ಅಂತ ನಾನು ಈ ದಾವೆ ಹಾಕಿದ ನಂತರ ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಭಾಗ ಕೇಳಿದಾಗ ಪ್ರತಿವಾದಿಯರು ಕಾಲತಳ್ಳುತ್ತಾ ಬಂದರು ಅಂತ ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

35. ಪಂಚಾಯಿತಿಯು ಯಾರ ಕಡೆಯಿಂದ ಮಾಡಿಸಿರುತ್ತೇನೆ ಅಂತ ಈಗ ಹೇಳಲು ಬರುವುದಿಲ್ಲ. ಪಂಚಾಯಿತಿಯಲ್ಲಿ 1 ನೇ ಪ್ರತಿವಾದಿ ಭಾಗವನ್ನು ಕೊಡಲು ಒಪ್ಪಿಕೊಂಡು ನಂತರ ಗ್ರಾಮದ ಕೆಲವರ ಪ್ರೇರಣೆಯಿಂದ ಭಾಗ ಕೊಡಲು ತಿರಸ್ಕರಿಸಿದನು ಅಂತ ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಯಾರ ಪ್ರೇರಣೆಯಿಂದ ಭಾಗ ಕೊಡಲು ತಿರಸ್ಕರಿಸಿದನು ಅಂತ ನನಗೆ ಹೇಳಲು ಬರುವುದಿಲ್ಲ. ನಾನು ಸುಳ್ಳು ದಾವಾ ಕಾರಣವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಶಶಿಕುಮಾರ್ 2017 ನೇ ಇಸವಿಯಲ್ಲಿ ಮೃತನಾಗಿರುತ್ತಾನೆ. ನ್ಯಾಯಾಲಯದಿಂದ ಸಮನ್ಸ್ ಹೋಗುವ ಮೊದಲನೇ 1 ನೇ ಪ್ರತಿವಾದಿ ಶಶಿಕುಮಾರ್ ತೀರಿಕೊಂಡಿದ್ದ ಎಂದರೆ ಸರಿಯಲ್ಲ.

36. ನನ್ನ ತಾಯಿಯನ್ನು ಸರಿಯಾಗಿ ನೋಡಿಕೊಳ್ಳದೇ ಇದ್ದುದಕ್ಕೆ ಅವರು ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಸೇರಿದ ಕುರಿ ಮತ್ತು ಮೇಕೆಗಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಅಂಗನವಾಡಿ ಶಿಕ್ಷಕಿ ಎಂದರೆ ಸರಿ. ನನ್ನ ತಾಯಿಯಿಂದ ನಾನು ಒತ್ತಾಯ ಪೂರ್ವಕವಾಗಿ ಈ ಕೇಸ್ ನ್ನು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ

ಸ್ವಂತ ಇಚ್ಚೆಯಿಂದ ಅವರೆ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಅಂತ ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕ.08.11.1997 ಮತ್ತು 10.05.2009 ರ ಪತ್ರಗಳಂತೆ ಈಗಾಗಲೇ 1 ರಿಂದ 3 ನೇ ದಾವಾ ಆಸ್ತಿಗಳ ಕುರಿತು ಪಾಲುವಿಭಾಗ ಆಗಿದ್ದು ಅವುಗಳಲ್ಲಿ ನನಗೆ ಯಾವುದೇ ಭಾಗದ ಹಕ್ಕಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ ಎನ್.ಬಿ., 2 ನೇ ಪ್ರತಿವಾದಿ ಪರ ವಕೀಲರಿಂದ**

37. 2 ಮತ್ತು 3 ನೇ ಪ್ರತಿವಾದಿಯರು ನನ್ನ ಸಹೋದರಿಯರು ಎಂದರೆ ಸರಿ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿ. 1 ರಿಂದ 4 ನೇ ದಾವಾ ಆಸ್ತಿಗಳ ಕುರಿತು ನಮ್ಮ ಕುಟುಂಬದವರು ಇಲ್ಲಿಯವರೆಗೆ ಪಾಲುವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಗೂ ಸಹ ದಾವಾ ಆಸ್ತಿಗಳಲ್ಲಿ ಸಮಭಾಗದ ಹಕ್ಕು ಇರುತ್ತದೆ ಎಂದರೆ ಸರಿ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.